ಕುವೆಂಪುರವರಿಗೆ ಮರಣೋತ್ತರ "ಭಾರತ ರತ್ನ" ನೀಡುವ ಬಗ್ಗೆ.

2198 - ಶ್ರೀ ಆರ್. ಕೃಷ್ಣಪ್ಪ (ಜಯಮಹಲ್) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಡಾ : ಕುವೆಂಪುರವರಿಗೆ ಮರಣೋತ್ತರ ಭಾರತ ರತ್ನ ಪ್ರಶಸ್ತಿ ನೀಡಬೇಕೆಂದು ರಾಜ್ಯ ಸರ್ಕಾರ ಕೇಂದ್ರಕ್ಕೆ ಶಿಫಾರಸ್ಸು ಮಾಡಿದೆಯೇ?

ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯ ಮಂತ್ರಿಗಳು) :

ಅ) ರಾಷ್ಟ್ರಕವಿ ಕುವೆಂಪುರವರಿಗೆ, ಭಾರತ ರತ್ನ*ಪ್ರಶಸ್ತಿ ನೀಡುವಂತೆ ಕೇಂದ್ರ ಸರ್ಕಾರಕ್ಕೆ 1992ರಲ್ಲಿ ರಾಜ್ಯ ಸರ್ಕಾರವು ಶಿಫಾರಸ್ಸು ಮಾಡಿದ್ದು, 1993ರಲ್ಲಿ ಪುನರರುಚ್ಚರಿಸಲಾಗಿದೆ. ಏತನ್ಮಧ್ಯೆ, ಕೇಂದ್ರ ಸರ್ಕಾರರು, ಪದ್ಮಶ್ರೀಣಿಯ ಪ್ರಶಸ್ತಿಗಳನ್ನು ಕೊಡುವ ವಿಷಯವು, ಭಾರತದ ಎರೆಡು ಉಚ್ಚ ನ್ಯಾಯಾಲಯಗಳಲ್ಲಿ ಪ್ರಶ್ನಿಸಲಾಗಿದೆಯೆಂದು ತಿಳಿಸಿದೆ. ಏಕಪಕ್ಷೀಯವಾಗಿ ತಡೆಯಾಜ್ಞೆ ನೀಡಿದ್ದ ಒಂದು ಉಚ್ಚ ನ್ಯಾಯಾಲಯವು ತಡೆಯಾಜ್ಞೆಯನ್ನು ತೆರವು ಮಾಡಿದ್ದರೂ ಉಲ್ಲಂಘಿಸಿದೆಯೇ ಎಂಬ ಮುಖ್ಯ ವಿಷಯವು ನಿರ್ಧಾರವಾಗದೇ ಇರುವುದರಿಂದ, ಕೇಂದ್ರ ಸರ್ಕಾರವು, ಈ ಬಗ್ಗೆ ನ್ಯಾಯಾಲಯದ ತೀರ್ಮಾನವಾಗುವ ತನಕ ಪದ್ಮಶ್ರೀಣಿಯ ಪ್ರಶಸ್ತಿಗಳನ್ನು ಪ್ರಕಟಿಸಬಾರದೆಂದು ನಿರ್ಧರಿಸಿದೆ.

1995-96ರಲ್ಲಿ ಮಾಡಲಾದ ವರ್ಗಾವಣೆಯ ವಿವರ.

2200 - ಶ್ರೀ ಮಂಜುನಾಥ ಸಿ. ಕುನ್ನೂರ (ಶಿಗ್ಗಾಂವ್) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯ ವತಿಯಿಂದ ಎಷ್ಟು ವರ್ಗಾವಣೆಗಳನ್ನು 1995-96ರಲ್ಲಿ ಮಾಡಲಾಯಿತು, ಅವುಗಳ ವಿವರ ನೀಡುವುದು.

ಆ) ಸದರಿ ವರ್ಗಾವಣೆ ಮಾಡುವಾಗ ಯಾವ ನಿಯಮಾವಳಿಗಳ ಮಾಡಲಾಗಿದೆ.

ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯಮಂತ್ರಿಗಳು) :

ಅ)	ಐ.ಎ.ಎಸ್. ವೃಂದದಲ್ಲಿ	124
	ಐ.ಪಿ.ಎಸ್. ವೃಂದದಲ್ಲಿ	52
	ಐ.ಎಫ್.ಎಸ್. ವೃಂದದಲ್ಲಿ	77
	ಒಟ್ಟು **253** ವರ್ಗಾವಣೆ ಮಾಡಲಾಗಿದೆ.	
	ಕೆ.ಎ.ಎಸ್. ಹಿರಿಯ ಶ್ರೇಣಿ ವೃಂದದಲ್ಲಿ	63
	-"- ಕಿರಿಯ ಶ್ರೇಣಿ ವೃಂದದಲ್ಲಿ	226
		289